ವಾರಕ್ಕೊಮ್ಮೆಯೋ ಮೂರು ವಾರಕ್ಕೊಮ್ಮೆಯೋ ವಾರಾಂತ್ಯದಲ್ಲಿ ಮಾತ್ರ ತುಸು ಹೊತ್ತು ಮುಖ ತೋರಿಸುತ್ತಿದ್ದ ಆತ. ಅವನ ಮೇಲಿನ ಕೋಪವನ್ನೆಲ್ಲಾ ಕೆಲಸಗಾರ ಮೇಲೇ ತೋರಿಸುತ್ತಿದ್ದ ಗೋವಿಂದರಾಯನಿಗೆ ಮಾಲೀಕನನ್ನು ಮಟ್ಟಹಾಕುವ ಸದಾವಕಾಶವೊಂದು ಲಭಿಸಿಬಿಟ್ಟಿತು. ಮನೆಯ ಬ್ಲಾಕುವರ್ಕುಗಳೆಲ್ಲಾ ಆಗಿ ಪ್ಲಾಸ್ಟರಿಂಗು ಮುಗಿಯುವ ಹೊತ್ತಿಗೆ ಪಶ್ಚಿಮದ ಕಡೆಯ ಛಜ್ಜಾವೊಂದು ಈತನ ಪ್ಲಾಟಿನ ಗಡಿಯ ಒಳಗೆ ತುಸು ಮುಂದಕ್ಕೆ ಚಾಚಿರುವುದು ಖಾತ್ರಿಯಿತ್ತು. ಪಕ್ಕದವ ಬರುವುದನ್ನೇ ಕಾದು ಹೋಗಿ ಹಿಡಿದ. 'ಛಜ್ಜಾ ಒಳಕ್ಕೆ ಬಂದಿದೆ' ಅಂದ. ಆತನನ್ನು ಪಕ್ಕದಲ್ಲೇ ನಿಲ್ಲಿಸಿಕೊಂಡು, ತನ್ನ ಮನೆಯ ಕಂಪೌಂಡಿನ ಎದುರು ನೇರಕ್ಕೆ ನಿಂತು ಒಂದು ಕಣ್ಣನ್ನು ಮುಚ್ಚಿ ಕುತ್ತಿಗೆಯನ್ನು ತುಸು ವಾರೆ ಮಾಡಿ ಇನ್ನೊಂದು ಕಣ್ಣಿನಿಂದ ಛಜ್ಜಾ ಹಾಗೂ ಕಂಪೌಂಡನ್ನೇ ನೋಡುತ್ತಾ ಕೆಲ ಸೆಕೆಂಡು ನಿಂತ. 'ಮಿನ್ನಿಮಮ್ ಆದ್ರೂ ಒಂದಿಂಚು ಒಳಗಿದೆ' ದೃಢವಾದ ದನಿಯಲ್ಲಿ ಹೇಳಿದ. ಆತನೇ ಮೇಸ್ತ್ರಿಯನ್ನು ಕೂಗಿ ಕರೆದು ತೂಗುಗುಂಡು ತರುವಂತೆ ಹೇಳಿದ. ಅದನ್ನೇ ಛಜ್ಜಾದ ತುದಿಗೆ ಹಿಡಿಸಿ ದಾರವನ್ನು ಇಳಿಬಿಡಿಸಿ 'ಹಾಂ... ಸ್ವಲ್ಪ, ಈಕಡೆ, ಅಲ್ಲಿ... ಅಲ್ಲಿ... ಸ್ವಲ್ಪ... ಆಕಡೆ... ಬೆರಳು ಲೂಸ್ ಬಿಡು...' ಎಂದೆಲ್ಲಾ ಅನ್ನುತ್ತಾ ಪ್ಲಂಬ್ ಹಿಡಿಸಿದ. ತೂಗುಗುಂಡಿನ ತುದಿ ಅತ್ತಿತ್ತ ವಾಲುತ್ತಾ ನಿಧಾನವಾಗಿ ಒಂದು ಬಿಂದುವಿನಲ್ಲಿ ಬಂದು ನಿಂತಿತು. 'ನೋಡಿ...ಬರೋಬ್ಬರಿ ಒಂದು ಇಂಚು!' ಎಂದು ಉದ್ಗರಿಸಿದ ಗೋವಿಂದರಾಯ, ಯುದ್ಧ ಗೆದ್ದವನಂತೆ! 'ನಮ್ಮದು ಇದೇ ಫೀಲ್ಡು, ನೋಡಿದ ತಕ್ಷಣ ಗೊತ್ತಾಗಿಬಿಡುತ್ತೆ. ನಿಮಗೆ ತೋರಿಸುವುದಕ್ಕೋಸ್ಕರ ಪ್ಲಂಬ್ ಹಿಡಿಸಿದೆ ಅಷ್ಟೇ' ಎಂದ.

ಛಜ್ಜಾ ಒಡೆಯಲೇಬೇಕೆಂಬ ತೀರ್ಮಾನವಾಯಿತು.

ಹೊಸಮನೆಯ ಪ್ಯಾರಾಪೆಟ್ಟು ಗೋಡೆಯೂ, ಈತನ ಪ್ಯಾರಾಪೆಟ್ಟು ಗೋಡೆಯೂ ಹಿಂದಿನ ಭಾಗದಲ್ಲಿ ಕೇವಲ ಒಂದೆರಡು ಅಡಿಯ ಅಂತರದಲ್ಲೇ ಇತ್ತು. ಒಂದು ಮನೆಯಿಂದ ತುಸು ಕಾಲಗಲಿಸಿ ಆಚೆ ಇಟ್ಟು ಇನ್ನೊಬ್ಬರ ಟೆರೇಸಿಗೆ ಹೋಗಬಹುದಾದಷ್ಟು. ಮಹಾನಗರದಲ್ಲಿ ಇದೆಲ್ಲ ಸರ್ವೇಸಾಮಾನ್ಯ ಎನ್ನುವುದಕ್ಕಿಂತ, ಮನೆಗಳು ಹತ್ತಿರವಿದ್ದಷ್ಟೂ ಸುರಕ್ಷತೆಯ ದೃಷ್ಟಿಯಿಂದ ಒಳ್ಳೆಯದೇ ಆದ್ದರಿಂದ ಗೋವಿಂದರಾಯ ಅದಕ್ಕೆ ಅಷ್ಟೇನೂ ತಲೆ ಕೆಡಿಸಿಕೊಳ್ಳಲು ಹೋಗಲಿಲ್ಲ.

ನಂತರ ಅಲ್ಲಿ ಸಿಮೆಂಟು ಬಿತ್ತು, ಇಲ್ಲಿ ಕ್ಲೀನ್ ಮಾಡಿಲ್ಲ, ರಾತ್ರಿ ತಡ ಹೊತ್ತಿನವರೆಗೂ ಡ್ರಿಲ್ ಮಾಡ್ತಾರೆ, ನಮ್ಮ ಮಗನಿಗೆ ಓದಲು ಡಿಸ್ಟರ್ಬ್ ಆಗುತ್ತೆ ಎಂಬೆಲ್ಲ ನಿತ್ಯದ ತಕರಾರುಗಳನ್ನೆದುರಿಸುತ್ತ, ಗೋವಿಂದರಾಯನ ಮನೆಯ ಎರಡು ದಿಕ್ಕಿನ ಗೋಡೆಗಳಿಗೂ ಹೊಸದಾಗಿ ಪೇಂಟ್ ಮಾಡಿಸಿಕೊಡುವುದರೊಂದಿಗೆ ಪಕ್ಕದವ ಗೃಹಪ್ರವೇಶ ಮಾಡಿ ಮುಗಿಸಿದ. ಈತನ ಮನೆಗೇ ಬಂದು ಆಮಂತ್ರಣ ಕೂಡ ನೀಡಿ ಹೋದ. ಹೆಂಡತಿಯನ್ನು ಮಾತ್ರ ಕಾರ್ಯಕ್ರಮಕ್ಕೆ ಕಳಿಸಿದ ಗೋವಿಂದರಾಯ ಅಡಿಗೆಗೆ ಯಾವ ಯಾವ ಸ್ವೀಟ್ ಮಾಡಿಸಿದ್ದರೆಂಬುದನ್ನು ಕೇಳಿ ತಿಳಿದುಕೊಂಡ.

ಅಂದಹಾಗೇ, ಪಕ್ಕದವ ಹೊಸಮನೆಗೆ ಬಂದು ನೆಲೆಸಿದ ಮೇಲೆ ಸಮಸ್ಯೆಗಳೇನೂ ಪರಿಹಾರವಾಗಿರಲಿಲ್ಲ. 'ನಿಮ್ಮ ಮನೆಯ ಓವರ್‌ಹೆಡ್ ಟ್ಯಾಂಕಿನಿಂದ ಓವರ್‌ಫ್ಲೋ ಆದ ನೀರು ನಮ್ಮನೆ ಗೇಟಿನ ಎದುರೇ ಬೀಳುತ್ತೆ, ಪೈಪು ಬೇರೆಡೆ ಡೈವರ್ಟ್ ಮಾಡಿ...' ನಿಮ್ಮ ಮನೆಯ ಟೆಲಿಫೋನ್ ಕೇಬಲ್ಲು ನಮ್ಮ ಟೆರೇಸಿನ ಮೇಲೇ ಹಾದು ಹೋಗಿದೆ, ಆಚೆ ಕಡೆಯಿಂದ ಕೇಬಲ್ಲು ಎಳೆದುಕೊಳ್ಳಿ...' ಎನ್ನುತ್ತ ಗೋವಿಂದರಾಯ ಒಂದಿಲ್ಲೊಂದು ಕಿರಿಕ್ಕು ಮಾಡುತ್ತಲೇ ಇದ್ದ. ಪಕ್ಕದವ ಕೂಡ ತನಗೆ ಸರಿ ಅನ್ನಿಸಿದ್ದನ್ನು ಮಾಡುತ್ತ, ಮತ್ತೊಮ್ಮೆ ಇವನೊಡನೆ ವಾದ ಮಾಡುತ್ತ